# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 106 | Pages. 2 | Date: 28-03-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 106 – ಪುಟಗಳು : 2 | 28-03-2026 | ಶನಿವಾರ | Ph: 8762954248 | ದರ : ₹1


# ಗಲಭೆಗೆ ಕಾರಣವಾದ ಪ್ರೀ ವೆಡ್ಡಿಂಗ್ ಶೂಟ್

## ಸಕಲೇಶಪುರದಲ್ಲಿ ಪ್ರಕ್ಷುಬ್ಧ ವಾತಾವರಣ | ಪೊಲೀಸರ ಎದುರೇ ಹೊಡೆದಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಪ್ರೀ ವೆಡ್ಡಿಂಗ್ ಶೂಟ್‌ಗೆ ತೆರಳಿದ್ದ ಛಾಯಾಗ್ರಾಹಕರ ಮೇಲೆ ಶುಕ್ರವಾರ ಸಕಲೇಶಪುರ ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇಗುಲದಲ್ಲಿ ಸ್ಥಳೀಯರು ಹಲ್ಲೆ ನಡೆಸಿದ್ದು ಇಡೀ ದಿನ ಸಾಕಷ್ಟು ತಿರುವು ಪಡೆಯಿತು.

ದೇವಾಲಯ ಆವರಣದಲ್ಲಿ ಗಂಭೀರ ಹಲ್ಲೆ ನಡೆಸಿದ್ದ ಗ್ರಾಮಸ್ಥರು ಸಂಜೆ ಗ್ರಾಮಾಂತರ ಠಾಣೆ ಎದುರು ಅದೇ ವರಸೆ ಮುಂದುವರಿಸಿದ್ದು ಪೊಲೀಸರ ಎದುರೇ ಹೊಡೆದಾಟ ನಡೆದಿರುವುದು ಪ್ರಕರಣದ ಗಂಭೀರತೆಯನ್ನು ಎತ್ತಿ ತೋರಿಸುತ್ತಿತ್ತು. ಮಾತುಕತೆ ಮೂಲಕ ಬಗೆಹರಿಯುತ್ತದೆಂದು ಭಾವಿಸಿದ ಪೊಲೀಸರಿಗೂ ಈ ವಿಚಾರ ತಲೆನೋವಾಗಿ ಪರಿಣಮಿಸಿದ್ದು ಎಲ್ಲಿಗೆ ಹೋಗಿ ತಲುಪುತ್ತದೆಂಬ ಗೊಂದಲ ಹುಟ್ಟಿದೆ.

### ಚಪ್ಪಲಿ ಧರಿಸಿ ಫೋಟೊ ಶೂಟ್ ಆರೋಪ

ದೇವಾಲಯ ಆವರಣದಲ್ಲಿ ಚಪ್ಪಲಿ ಧರಿಸಿ ಓಡಾಡಿದರು, ದೇಗುಲದ ಗೋಡೆಗೆ ಒರಗಿ ಫೋಟೊ ತೆಗೆಸಿಕೊಂಡು ಕ್ಷೇತ್ರವನ್ನು ಅಪವಿತ್ರಗೊಳಿಸುತ್ತಿದ್ದಾರೆಂದು ಆರೋಪಿಸಿ ಬೆಳಿಗ್ಗೆ ಸ್ಥಳೀಯ ಇಬ್ಬರು ಛಾಯಾಗ್ರಾಹಕರ ಮೇಲೆ ಹಲ್ಲೆ ನಡೆಸಿದ್ದರು. ಅದರಿಂದ ಆಕ್ರೋಶಗೊಂಡ ಛಾಯಾಗ್ರಾಹಕರು ಗ್ರಾಮಾಂತರ ಠಾಣೆಗೆ ಆಗಮಿಸಿ ಹಲ್ಲೆಕೋರರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಪಟ್ಟು ಹಿಡಿದರು. ಈ ವೇಳೆ ಮರಗುಂದ ಗ್ರಾಮಸ್ಥರು ಮತ್ತು ಛಾಯಾಚಿತ್ರ ಗ್ರಾಹಕರ ಸಂಘದ ಪದಾಧಿಕಾರಿಗಳ ನಡುವೆ ಗಲಾಟೆ ಜೋರಾಯಿತು. ಪರಿಸ್ಥಿತಿ ವಿಕೋಪಕ್ಕೆ ತಿರುಗಿ



ಪೊಲೀಸರ ಎದುರೇ ಗ್ರಾಮಸ್ಥರು ಮತ್ತೆ ಛಾಯಾಚಿತ್ರ ಗ್ರಾಹಕರನ್ನು ಹಿಗ್ಗಾಮುಗ್ಗಾ ಥಳಿಸಿದರು. ಈ ಮೂಲಕ ಸಣ್ಣ ಜಗಳವೊಂದು ದೊಡ್ಡ ರಾದ್ಧಾಂತಕ್ಕೆ ಕಾರಣವಾಯಿತು.

ಘಟನೆಯಲ್ಲಿ ಹಾಸನದ ಚೇತನ್, ನವಿನಂದನ್, ಬೆಂಗಳೂರಿನ ಮೇಕಪ್ ಆರ್ಟಿಸ್ಟ್ ಶ್ವೇತಾ ಹಾಗು ಅಭಿಷೇಕ್ ಗಾಯಗೊಂಡಿದ್ದಾರೆ. ಮೂಡಿಗೆರೆ ತಾಲ್ಲೂಕಿನ ಮರ್‍ಯ್ಯಾಬೈಲಿನ ಅಭಿ, ಬೆಟ್ಟಗೆರೆಯ ಪ್ರಶಾಂತ್, ಮೇಕನಗದ್ದೆ ರಕ್ಷಿ, ಬಕ್ಕಾಡಿ ಅರವಿಂದ, ಉಚಿತ್, ಮೇಕನಗದ್ದೆ ಪ್ರಜ್ವಲ್, ಸಕಲೇಶಪುರ ತಾಲ್ಲೂಕಿನ ನಿಶಾಂತ್ ಮತ್ತಿತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

### ಆರೋಪಿಗಳ ಬಂಧಿಸದಿದ್ದರೆ ಹೋರಾಟ ತೀವ್ರ

ಜಿಲ್ಲಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಸ್ವಾಮಿ ಮಾತನಾಡಿ, ಪ್ರೀ ವೆಡ್ಡಿಂಗ್ ಶೂಟ್‌ಗಾಗಿ ಹಾಸನ ಹಾಗೂ ಬೆಂಗಳೂರಿನಿಂದ ನಮ್ಮ ಸಂಘದ ಸದಸ್ಯರು ಬಂದಿದ್ದರು. ಕಿಡಿಗೇಡಿಗಳು ಅನಾವಶ್ಯಕವಾಗಿ ನಮ್ಮವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಛಾಯಾಗ್ರಾಹಕರಿಗೆ ಭದ್ರತೆ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಒಬ್ಬ ಛಾಯಾಗ್ರಾಹಕರ ಚಿನ್ನದ ಸರ ದೋಚಲಾಗಿದೆ. ಪೊಲೀಸ್ ಇಲಾಖೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಹಲ್ಲೆಕೋರರನ್ನು ಶೀಘ್ರ ಬಂಧಿಸಬೇಕು. ಇಲ್ಲವಾದರೆ ಪ್ರತಿಭಟನೆ ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಚೇತನ್ ಹಾಗೂ ಸ್ನೇಹಿತರು ಪ್ರೀ ವೆಡ್ಡಿಂಗ್ ಶೂಟ್ ಮಾಡುತ್ತಿದ್ದಾಗ ಅಲ್ಲಿಗೆ ಬಂದ ಅಭಿ ಹಾಗೂ ಸ್ನೇಹಿತರು, ಇಲ್ಲಿ ಚಪ್ಪಲಿ ಧರಿಸುವಂತಿಲ್ಲ, ಧಾರ್ಮಿಕ ನಂಬಿಕೆಗೆ ಧಕ್ಕೆ ತರುವ ರೀತಿ ವರ್ತಿಸಬೇಡಿ ಎಂದು ಹೇಳಿದ್ದಾರೆ. ಅಷ್ಟು ಹೇಳುತ್ತಿದ್ದಂತೆ ಛಾಯಾಗ್ರಾಹಕರು ಏರುದನಿಯಲ್ಲಿ ಮಾತನಾಡಿದ್ದಕ್ಕೆ ಅಭಿಯು ನವನಿಂದನ್ ಮೇಲೆ ಹಲ್ಲೆ ಮಾಡಿದ್ದಾನೆ. ನಂತರ ಅಲ್ಲಿಂದ ತೆರಳಿ ಬೆಳಿಗ್ಗೆ 10 ಗಂಟೆಗೆ ಹೆಚ್ಚಿನ ಸಂಖ್ಯೆಯ ಗ್ರಾಮಸ್ಥರೊಂದಿಗೆ ವಾಪಾಸ್ಸಾಗಿ ವಾಗ್ವಾದ ನಡೆಸಿದ್ದಾನೆ.

ತೀವ್ರ ಹಲ್ಲೆಗೊಳಗಾದ ಯುವಕರು ತಕ್ಷಣವೇ ಗ್ರಾಮಾಂತರ ಠಾಣೆಗೆ ದೌಡಾಯಿಸಿ ಹಲ್ಲೆ ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ಪಟ್ಟು ಹಿಡಿದರು.



ಅಷ್ಟರೊಳಗೆ ಗಾಯಾಳುಗಳ ಕುಟುಂಬಸ್ಥರು ಹಾಗೂ ಜಿಲ್ಲಾ ಛಾಯಾಗ್ರಾಹಕರ ಸಂಘದ ಪದಾಧಿಕಾರಿಗಳು ಜಮಾಯಿಸಿದ್ದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು.

ಠಾಣೆ ಎದುರು ಛಾಯಾಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ವಿಷಯ ತಿಳಿದು ಹಿಂದೂಪರ ಸಂಘಟನೆ ಕಾರ್ಯಕರ್ತರು ಹಾಗೂ ಮರಗುಂದ ಗ್ರಾಮಸ್ಥರು ಹಾಜರಾದ್ದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಈ ವೇಳೆ ಗಾಯಾಳುಗಳ ಸಂಬಂಧಿಕರು ಹಾಗೂ ಛಾಯಾಗ್ರಾಹಕರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರಿಂದ ಆಕ್ರೋಶಭರಿತರಾದ ಗ್ರಾಮಸ್ಥರು ಪೊಲೀಸರ ಸಮ್ಮುಖದಲ್ಲೇ ಹಿಗ್ಗಾಮುಗ್ಗಾ ಥಳಿಸಿದರು. ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

## ಮಹಾನಗರ ಪಾಲಿಕೆಗೆ 3.89 ಕೋಟಿ ರೂ. ಉಳಿತಾಯ ಬಜೆಟ್ ಮಂಡನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಮಹಾನಗರ ಪಾಲಿಕೆಯ 2026–27ನೇ ಸಾಲಿನ ಬಜೆಟ್‌ನ್ನು ಮೈಸೂರು ವಿಭಾಗ ಪ್ರಾದೇಶಿಕ ಆಯುಕ್ತರೂ ಆಗಿರುವ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಶುಕ್ರವಾರ ಮಂಡಿಸಿದರು.

ಪಾಲಿಕೆಯ ಕುವೆಂಪು ಸಭಾಂಗಣದಲ್ಲಿ ಆಡಳಿತಾಧಿಕಾರಿ ಮಂಡಿಸಿದ ಆಯವ್ಯಯದಲ್ಲಿ 3.89 ಕೋಟಿ ಉಳಿತಾಯ ನಿರೀಕ್ಷಿಸಲಾಗಿದೆ. ಆರಂಭಿಕ ಶಿಲ್ಕು 4,880 ಲಕ್ಷಗಳಾಗಿದ್ದು, ಜಮೆಗಳು 69,220 ಲಕ್ಷ. ಒಟ್ಟು 74,101 ಲಕ್ಷ( ಪಾವತಿಗಳು 68,831, 5,270 ಲಕ್ಷ) ಎಂದು ವಿವರಿಸಿದರು.

ಆದಾಯ ನಿರೀಕ್ಷೆ: ಪ್ರಸಕ್ತ ಸಾಲಿಗೆ ಒಟ್ಟು ರಾಜಸ್ವ ಆದಾಯವಾಗಿ 150.25 ಕೋಟಿ ನಿರೀಕ್ಷಿಸಲಾಗಿದೆ. ನೀರಿನ ತೆರಿಗೆ ಹಾಗೂ ಒಳಚರಂಡಿ ನಿರ್ವಹಣಾ ಕರವಾಗಿ 560 ಲಕ್ಷ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ಕಟ್ಟಡ ಪರವಾನಗಿ ಶುಲ್ಕ, ನೆಲಬಾಡಿಗೆ, ರಸ್ತೆ ಅಗೆತ ಶುಲ್ಕ ಹೀಗೆ ವಿವಿಧ ರೂಪಗಳಲ್ಲಿ 915 ಲಕ್ಷ ಜಮೆ ನಿರೀಕ್ಷಿಸಲಾಗಿದೆ. ನಗರಪಾಲಿಕೆ ಆಸ್ತಿಗಳಿಂದ 249 ಲಕ್ಷ ಬಾಡಿಗೆ ನಿರೀಕ್ಷಿಸಲಾಗಿದೆ. ಹಾಗೆಯೇ ಸಂಸದರು, ಶಾಸಕರು, ಎಂಎಲ್‌ಸಿ ಅವರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಿಂದ 400 ಲಕ್ಷ ಅನುದಾನ ನಿರೀಕ್ಷಿಸಲಾಗಿದೆ.

ಹೆಚ್ಚಾಗಿ ಸ್ವಚ್ಛ ಭಾರತ್, ಅಮೃತ್ ಯೋಜನೆ, ಕುಡಿಯುವ ನೀರು, ಪೌರ ಕಾರ್ಮಿಕರಿಗೆ ಗೃಹ ಭಾಗ್ಯ, ಇಂದಿರಾ ಕ್ಯಾಂಟೀನ್ ನಿರ್ವಹಣೆಗೂ ರಾಜ್ಯ–ಕೇಂದ್ರಗಳಿಂದ ಅನುದಾನ ನಿರೀಕ್ಷಿಸಲಾಗಿದೆ.

## ಮುದಿಬೆಟ್ಟ ಕಾವಲು ಬೆಟ್ಟದ ಆಂಜನೇಯ ಸ್ವಾಮಿಗೆ ಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಗಡಿಗ್ರಾಮ ಮುದಿಬೆಟ್ಟ ಕಾವಲು ಶ್ರೀ ಬೆಟ್ಟದ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಶ್ರೀ ರಾಮನವಮಿ ಪ್ರಯುಕ್ತ ವಿಶೇಷ ಪೂಜೆ ನಡೆಯಿತು.

ಮುಂಜಾನೆಯೇ ಹಸಿರು ಚಪ್ಪರ ಹಾಕಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮಹಿಳೆಯರು ನೀರಾಯಿಸಿ ರಂಗೋಲಿ ಬಿಡಿಸಿ ಅಲಂಕರಿಸಿದ್ದರು.

ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಗ್ರಾಮಸ್ಥರೆಲ್ಲ ಸೇರಿ ಶ್ರೀ ಬೆಟ್ಟದ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಹೊನ್ನಶೆಟ್ಟಿಹಳ್ಳಿ, ಉಳ್ಳಾವಳ್ಳಿ, ಮುದಿಬೆಟ್ಟ ಕಾವಲು ಹಾಗೂ ಮೆಳ್ಳಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಿಂದ ಭಕ್ತರು ಆಗಮಿಸಿ ಹಣ್ಣು–ಕಾಯಿ ಅರ್ಪಿಸಿ ಗಂಧ–ಕರ್ಪೂರ ಬೆಳಗಿಸಿದರು.

ಪೂರ್ವ ಕಾಲದ ಶ್ರೀ ಬೆಟ್ಟದ ಆಂಜನೇಯ ಸ್ವಾಮಿ ವಿಗ್ರಹವು ಶಿಥಿಲಾವಸ್ಥೆ ತಲುಪಿದ್ದು ಸುತ್ತಮುತ್ತಲ ಗ್ರಾಮಸ್ಥರು ಹಾಗೂ ಭಕ್ತರ ನೆರವಿನೊಂದಿಗೆ ಹೊಸ ವಿಗ್ರಹ ಪ್ರತಿಷ್ಠಾಪಿಸಲಾಗುವುದು ಎಂದು ಸ್ಥಳೀಯರು ತಿಳಿಸಿದರು.

ಶ್ರೀ ಬೆಟ್ಟದ ಆಂಜನೇಯ ಸ್ವಾಮಿಗೆ ಮಹಾ ಮಂಗಳಾರತಿ ಬೆಳಗಿಸಿದ ಬಳಿಕ ಮಜ್ಜಿಗೆ, ಪಾನಕ ಹಾಗೂ ಪ್ರಸಾದ ವಿತರಣೆ ನಡೆಯಿತು. ಮುದಿಬೆಟ್ಟ ಕಾವಲು, ಮೆಳ್ಳಹಳ್ಳಿ, ಹೊನ್ನಶೆಟ್ಟಿಹಳ್ಳಿ, ಬೆಂಡೆಕೆರೆ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಆಚರಣೆಯಲ್ಲಿ ಪಾಲ್ಗೊಂಡಿದ್ದರು.

## ಸರ್ಕಾರಿ ನರ್ಸಿಂಗ್ ಕಾಲೇಜಿನಲ್ಲಿ ಪ್ರತಿಜ್ಞಾ ವಿಧಿ ಸ್ವೀಕಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ನಗರದ ಸರ್ಕಾರಿ ಶುಶ್ರೂಷಕರ ಮಹಾವಿದ್ಯಾಲಯದಲ್ಲಿ ಶುಕ್ರವಾರ 20ನೇ ಶೈಕ್ಷಣಿಕ ಸಾಲಿನ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳ ಜ್ಯೋತಿ ಬೆಳಗಿಸುವಿಕೆ ಹಾಗೂ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭ ನೆರವೇರಿತು.

ಕಾರ್ಯಕ್ರಮ ಉದ್ಘಾಟಿಸಿದ ಹಿಮ್ಸ್ ನಿರ್ದೇಶಕ ಡಾ. ಬಿ.ರಾಜಣ್ಣ ಮಾತನಾಡಿ, ರೋಗಿಗಳ ಸೇವೆಯೇ ನರ್ಸಿಂಗ್ ಕ್ಷೇತ್ರದ ಮೂಲ ತತ್ವ. ಆ ನಿಟ್ಟಿನಲ್ಲಿ ಉತ್ತಮ ವ್ಯಾಸಂಗ ಪಡೆದು ಸಾರ್ವಜನಿಕ ಸೇವೆಗೆ ತಾವೆಲ್ಲರೂ ತಯಾರಾಗಬೇಕೆಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲರಾದ ಸಿ.ಆರ್. ರತ್ನಮ್ಮ ಮಾತನಾಡಿ, ಉತ್ತಮ ಸೇವಾ ಮನೋಭಾವದೊಂದಿಗೆ ಸಮಾಜಕ್ಕೆ ಆದರ್ಶ ನರ್ಸಿಂಗ್ ವೃತ್ತಿಪರರಾಗಿ ಹೊರ ಹೊಮ್ಮುವಂತೆ ಕರೆ ನೀಡಿದರು.

ಹಿಮ್ಸ್ ಪ್ರಾಂಶುಪಾಲರಾದ ಡಾ. ಸಿ.ವಿ.ಕವಿತ, ಮುಖ್ಯ ಆಡಳಿತಾಧಿಕಾರಿ ರೇಖಾ, ವೈದ್ಯಕೀಯ ಅಧೀಕ್ಷಕ ಡಾ. ರಾಘವೇಂದ್ರ ಪ್ರಸಾದ್, ಆರ್ಥಿಕ ಸಲಹೆಗಾರ ಕೆ.ಎನ್.ಗೋವಿಂದರಾಜು, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಜಿ.ಎಸ್.ನಾಗಪ್ಪ, ನಿವೃತ್ತ ಪ್ರಾಂಶುಪಾಲರಾದ ಸರೋಜಿನಿ ದೇವಿ, ಉಪ ಪ್ರಾಂಶುಪಾಲರಾದ ಸಿ. ಹೇಮಾವತಿ ಇತರರಿದ್ದರು. ಸರೋಜಿನಿ ದೇವಿ ಅವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

## ಆಧುನಿಕ ಸವಾಲುಗಳ ನಡುವೆಯೂ ರಂಗಭೂಮಿ ಗಟ್ಟಿಯಾಗಿದೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ತಲೆ ತಲಾಂತರಗಳಿಂದ ಕಲಾವಿದರು ರಂಗಭೂಮಿ ಕಲೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಆಧುನಿಕ ಯುಗದಲ್ಲಿಯೂ ತಂತ್ರಜ್ಞಾನ ಎಷ್ಟೇ ಬೆಳೆದರೂ ರಂಗಭೂಮಿ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡಿದೆ. ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳು ಇನ್ನೂ ಜನಮನಗಳಲ್ಲಿ ಜೀವಂತವಾಗಿವೆ ಎಂದು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಹೇಳಿದರು.

ನಗರದ ಹೇಮಾವತಿ ಪ್ರತಿಮೆ ಬಳಿ ಶುಕ್ರವಾರ ಕರ್ನಾಟಕ ಜಾನಪದ ಪರಿಷತ್, ಬೀದಿ ನಾಟಕ ಕಲಾ ತಂಡ, ಪ್ರಗತಿ ಗ್ರಾಮೀಣ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ, ವಾಲ್ಮೀಕಿ ಮಹಿಳಾ ಸಾಂಸ್ಕೃತಿಕ ಕಲಾ ಸಂಸ್ಥೆ, ಹೊಯ್ಸಳ ಜಾನಪದ ಕಲಾ ಸಂಸ್ಥೆಯಿಂದ ನಡೆದ ವಿಶ್ವ ರಂಗಭೂಮಿ ದಿನಕ್ಕೆ ಚಾಲನೆ ನೀಡಿ ಮಾತನಾಡಿ, ಹಿಂದೆ ಕಡಿಮೆ ಪ್ರಮಾಣದಲ್ಲಿ ಇದ್ದ ಮಹಿಳಾ ಭಾಗವಹಿಸುವಿಕೆ ಈಗ ಗಣನೀಯವಾಗಿ ಹೆಚ್ಚಾಗಿದೆ. ಮಹಿಳೆಯರು ಕೂಡ ರಂಗಭೂಮಿಯಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿ ಕಲೆ ಬೆಳೆಸುವಲ್ಲಿ



ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಭೂಮಿ ಇರುವ ತನಕ ರಂಗಭೂಮಿ ಕಲೆ ಜೀವಂತವಾಗಿರುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಜಾನಪದ ವಿದ್ವಾಂಸ ಡಾ. ಹಂಪನಹಳ್ಳಿ ತಿಮ್ಮೇಗೌಡ ಮಾತನಾಡಿ, ನೂರಾರು ವರ್ಷಗಳ ಇತಿಹಾಸ ಹೊಂದಿರುವ ರಂಗಭೂಮಿ ಕಲೆ ಉಳಿಸಿ ಬೆಳೆಸುವುದು ಸಮಾಜದ ಎಲ್ಲರ ಜವಾಬ್ದಾರಿ ಎಂದು ತಿಳಿಸಿದರು.

1961ರಲ್ಲಿ ಈ ದಿನದ ಪರಿಕಲ್ಪನೆ ಹುಟ್ಟಿಕೊಂಡು 1962ರಲ್ಲಿ ಜಾರಿಗೆ ಬಂದಿದೆ. ಫ್ರಾನ್ಸ್‌ನಲ್ಲಿ ರಂಗನಾಟಕ ಪ್ರದರ್ಶನದ ಮೂಲಕ ಈ ದಿನಾಚರಣೆಗೆ ಚಾಲನೆ ನೀಡಲಾಗಿದೆ. ಅಂದಿನಿಂದ ಇಂದಿನವರೆಗೆ ವಿಶ್ವದಾದ್ಯಂತ ರಂಗಭೂಮಿ ಕಲಾವಿದರು ಈ ದಿನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದಾರೆ ಎಂದರು.

ರಂಗಭೂಮಿ ಎಂದರೆ ಕೇವಲ ಮನರಂಜನೆಗೆ ಸೀಮಿತವಾಗಿರುವ ಕಲೆ ಅಲ್ಲ. ಅದು ಸಮಾಜದ ಅವಿಭಾಜ್ಯ ಅಂಗವಾಗಿದೆ. ಸಾಮಾಜಿಕ ಬದಲಾವಣೆಗೆ ಪ್ರೇರಕವಾಗಿರುವ ಶಕ್ತಿಯಾಗಿದೆ. ರಂಗಭೂಮಿಯ ಮೂಲಕ ವ್ಯಕ್ತಿಗಳ ಮನೋಭಾವನೆಗಳಲ್ಲಿ ಪರಿವರ್ತನೆ ಉಂಟಾಗುತ್ತದೆ.

ಸಮಾಜದಲ್ಲಿ ಅಡಕವಾಗಿರುವ ಅನ್ಯಾಯ, ಅಸಮಾನತೆ, ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸುವಲ್ಲಿ ಈ ಕಲೆ ಮಹತ್ವದ ಪಾತ್ರವಹಿಸಿದೆ ಎಂದು ಅಭಿಪ್ರಾಯಪಟ್ಟರು. ರಂಗಭೂಮಿಯಲ್ಲಿರುವ ಕಲಾವಿದರು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಸಾಗಿಸುವ ಸಾಂಸ್ಕೃತಿಕ ರಾಯಭಾರಿಗಳು. ಈ ಕಲೆಯನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿ. ಸರ್ಕಾರವೂ ನಾಟಕ ಅಕಾಡೆಮಿಗಳ ಮೂಲಕ ಬೀದಿ ನಾಟಕ, ಜನಪದ ನಾಟಕಗಳಿಗೆ ಹೆಚ್ಚಿನ ಉತ್ತೇಜನ ನೀಡಬೇಕು. ಗ್ರಾಮೀಣ ಭಾಗಗಳಲ್ಲಿ ಹೆಚ್ಚಿನ ಕಾರ್ಯಕ್ರಮ ಆಯೋಜಿಸುವ ಮೂಲಕ ಹೊಸ ಪ್ರತಿಭೆಗಳನ್ನು ಹೊರತರುವ ಅಗತ್ಯವಿದೆ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಮಾತನಾಡಿ, ರಂಗಭೂಮಿ ಕಲೆ ಭವಿಷ್ಯದ ಪೀಳಿಗೆಗೆ ಉಳಿಯಬೇಕು. ಅದಕ್ಕಾಗಿ ನಾವೆಲ್ಲರೂ ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಿಸಬೇಕೆಂದರು.

ಕಾರ್ಯಕ್ರಮದ ಅಂಗವಾಗಿ ಬೀದಿ ನಾಟಕ, ರಂಗಗೀತೆ ಹಾಗು ವಿವಿಧ ಸಾಂಸ್ಕೃತಿಕ ಪ್ರದರ್ಶನಗಳು ಪ್ರೇಕ್ಷಕರ ಮನ ಸೆಳೆದವು. ಕಲಾವಿದರಾದ ಬಿ.ಟಿ.ಮಾನವ, ಗ್ಯಾರಂಟಿ ರಾಮಣ್ಣ, ದುದ್ದ ಯೋಗೇಂದ್ರ, ನೀಲಮ್ಮ, ಮಂಜುಳಾ ಸೇರಿ ಹಲವು ಕಲಾವಿದರು ಮನೋಜ್ಞ ಪ್ರದರ್ಶನಗಳ ಮೂಲಕ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

## ಬಿಕನಗೋಡು ದೇಗುಲಕ್ಕೆ ಧರ್ಮಸ್ಥಳ ಸಂಘದಿಂದ ನೆರವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಬೇಲೂರು: ತಾಲ್ಲೂಕಿನ ಬಿಕನಗೋಡು ಗ್ರಾಮದ ಶ್ರೀ ಕಾಲಭೈರವೇಶ್ವರ ದೇವಾಲಯ ಅಡುಗೆ ಮನೆ ನಿರ್ಮಾಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 1 ಲಕ್ಷ ರೂ. ಅನುದಾನ ಮಂಜೂರಾಗಿದ್ದು ಯೋಜನೆ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್ ಅವರು ದೇಗುಲ ಸಮಿತಿಗೆ ಹಸ್ತಾಂತರಿಸಿದರು.

ಯೋಜನಾಧಿಕಾರಿ ಮಂಜುಳಾ ಮಾತನಾಡಿ, ದೇವಾಲಯವು ಉತ್ತಮ ಪರಿಸರ ಹೊಂದಿದ್ದು ದೇವಾಲಯ ಆಕರ್ಷಕವಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಪ್ರಸಾದದ ವ್ಯವಸ್ಥೆಗೆ ನೆರವಾಗಲೆಂದು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ.ವಿರೇಂದ್ರ ಹೆಗ್ಗಡೆ ಅವರು ಆರ್ಥಿಕ ನೆರವು ನೀಡಿದ್ದಾರೆ ಎಂದರು.

ದೇವಾಲಯ ಸಮಿತಿಯ ಮೊಗಪ್ಪ ಗೌಡ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ಸಾಕಷ್ಟು ದೇವಾಲಯಗಳ ಜೀರ್ಣೋದ್ಧಾರ ಮಾಡುತ್ತಿದ್ದು ನಮ್ಮ ದೇವಾಲಯದ ಅಡುಗೆ ಮನೆ ನಿರ್ಮಾಣ ಕಾರ್ಯಕ್ಕೆ ಒಂದು ಲಕ್ಷ ರೂ. ಅನುದಾನ ನೀಡಿರುವುದು ಸೌಭಾಗ್ಯ ಎಂದರು.

ಕೃಷಿ ಮೇಲ್ವಿಚಾರಕ ಆರ್.ನಾಗರಾಜ್, ದೇವಾಲಯ ಸಮಿತಿ ಪದಾಧಿಕಾರಿಗಳಾದ ಪ್ರಸನ್ನ ಗೌಡ, ಎಂ.ಪಿ.ಮಲ್ಲೇಗೌಡ, ರುದ್ರೇಗೌಡ, ರೇಣುಕಾ ಶಂಕರೇಗೌಡ, ರಾಜೇಗೌಡ, ಜಗದೀಶ್, ಧರ್ಮಯ್ಯ, ದೇವರಾಜ್, ಸೇವಾ ಪ್ರತಿನಿಧಿ ಪ್ರೀತಿ ಇತರರಿದ್ದರು.

## ಆರೋಗ್ಯ ಪಯಣದಲ್ಲಿ ಲಸಿಕಾ ಅಭಿಯಾನ ಮಹತ್ವದ ಹೆಜ್ಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಚನ್ನರಾಯಪಟ್ಟಣ: ಗರ್ಭಕೊರಳ ಕ್ಯಾನ್ಸರ್ ತಡೆಗಟ್ಟುವ ಸಾರ್ವಜನಿಕ ಆರೋಗ್ಯದ ಪಯಣದಲ್ಲಿ ಲಸಿಕಾ ಅಭಿಯಾನ ಮಹತ್ವದ ಪಾತ್ರ ವಹಿಸುತ್ತದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ವತಿಯಿಂದ ಆಯೋಜಿಸಿದ್ದ ಹೆಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸುಯೋಜಿತ ಮತ್ತು ವ್ಯವಸ್ಥಿತ ಅಭಿಯಾನಗಳ ಮೂಲಕ ಗಂಭೀರ ಕಾಯಿಲೆಗಳ ಹೊರೆಯನ್ನು ತೊಡೆದು ಹಾಕಿದ ಸುದೀರ್ಘ ಇತಿಹಾಸ ಭಾರತಕ್ಕಿದೆ ಎಂದರು.

1950ರ ದಶಕದ ಕಾಯಿಲೆಗಳಿಂದ ಹಿಡಿದು ಇತ್ತೀಚಿನ ಕೋವಿಡ್ ಲಸಿಕಾ ಅಭಿಯಾನಗಳವರೆಗೆ ಇವೆಲ್ಲವನ್ನೂ ಯಶಸ್ಸಿನ ಗುರಿಯೊಂದಿಗೆ ರೂಪಿಸಲಾಗಿತ್ತು. ಅದೇ ಶಿಸ್ತು ಮತ್ತು ಸಾರ್ವಜನಿಕ ನಂಬಿಕೆ ಈಗ ಹೆಚ್‌ಪಿವಿ ಲಸಿಕಾ ಕಾರ್ಯಕ್ರಮದ ಯಶಸ್ಸನ್ನು ನಿರ್ಧರಿಸಲಿದೆ. ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ಮತ್ತು ರಾಜ್ಯ



ಸರ್ಕಾರ ಕೈಜೋಡಿಸಿ ಕಾರ್ಯಕ್ರಮವನ್ನು ಅಭಿಯಾನದ ಮಾದರಿಯಲ್ಲಿ ಮುನ್ನಡೆಸುತ್ತಿರುವುದು ಶ್ಲಾಘನೀಯ ಎಂದರು. ತಾಲ್ಲೂಕಿನಾದ್ಯಂತ 14 ವರ್ಷ ತುಂಬಿದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸರ್ ಬಾರದಂತೆ ತಡೆಗಟ್ಟಲು ಲಸಿಕಾ ಅಭಿಯಾನ ಪ್ರಾರಂಭಿಸಲಾಗಿದ್ದು, ಈ ಸಂಬಂಧವಾಗಿ ಅರ್ಹ ಹೆಣ್ಣು ಮಕ್ಕಳ ತಂದೆ ತಾಯಿಯವರಿಗೆ ಸದರಿ ಲಸಿಕೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ರೂಪಿಸಿಕೊಂಡು ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಹಾಗೂ ಸಾರ್ವಜನಿಕ ಆಸ್ಪತ್ರೆಗಳಿಗೆ ಮಕ್ಕಳನ್ನು ಕರೆಯಿಸಿ ಸುರಕ್ಷಿತವಾಗಿ ಲಸಿಕೆ ನೀಡಬೇಕು. ತಾಲ್ಲೂಕಿನ ಎಲ್ಲಾ ಹೆಣ್ಣು ಮಕ್ಕಳು ಸರ್ಕಾರದಿಂದ ಉಚಿತವಾಗಿ ನೀಡುವ ಹೆಚ್‌ಪಿವಿ ಲಸಿಕೆ ಪಡೆದುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಮೂಲಕ ಗರ್ಭಕಂಠದ ಕ್ಯಾನ್ಸರ್ ಮುಕ್ತ ಸಮಾಜ ನಿರ್ಮಿಸಬೇಕೆಂದು ಕರೆ ನೀಡಿದರು. ವದಂತಿಗೆ ಕಿವಿಗೊಡದಿರಿ: ಖಾಸಗಿ ಮಾರುಕಟ್ಟೆಯಲ್ಲಿ 5 ಸಾವಿರ ರೂ.ಗೆ ಮಾರಾಟವಾಗುವ ಈ ಲಸಿಕೆಯನ್ನು ಸರ್ಕಾರ ಉಚಿತವಾಗಿ ನೀಡುತ್ತಿದೆ. ಅರ್ಹ ಹೆಣ್ಣು ಮಕ್ಕಳು ಲಸಿಕೆ ಹಾಕಿಸಿಕೊಂಡು ಕ್ಯಾನ್ಸರ್ ಬಾರದಂತೆ ರಕ್ಷಣೆ ಪಡೆಯಬಹುದು. ಹೆಚ್‌ಪಿವಿ ಲಸಿಕೆಯ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ನಡೆಸಲಾಗುತ್ತಿದೆ. ವದಂತಿಯನ್ನು ನಂಬಿ ಲಸಿಕೆ ಹಾಕಿಸಿಕೊಳ್ಳದೇ ಇರಬಾರದು ಎಂದು ಮನವಿ ಮಾಡಿದರು.


ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಯು.ಆರ್. ಯುವರಾಜ್ ಮಾತನಾಡಿ, ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ತಾಲ್ಲೂಕಿನಲ್ಲಿ ಹೆಚ್‌ಪಿವಿ ಲಸಿಕಾಕರಣ ಕೈಗೊಳ್ಳಲಾಗಿದೆ. ದಿನನಿತ್ಯದ ರೋಗ ನಿರೋಧಕ ಶಕ್ತಿ ವೃದ್ಧಿ, ಎಂಆರ್ ನಿರ್ಮೂಲನೆ ಹಾಗು ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಮೂಲಕ ಹೆಣ್ಣು ಮಕ್ಕಳ ಭವಿಷ್ಯವನ್ನು ಸುರಕ್ಷಿತಗೊಳಿಸಲು ಸುರಕ್ಷಿತ ಲಸಿಕೆ ಅಭಿಯಾನ ಕೈಗೊಳ್ಳಲಾಗಿದೆ. ಹೆಚ್‌ಪಿವಿ ಲಸಿಕೆಯು ಹೆಣ್ಣು ಮಕ್ಕಳಲ್ಲಿ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿ ಎಂದರು.

# ಬೇಲೂರು ಪುರಸಭೆ: 25 ಕೋಟಿ ರೂ. ಗಾತ್ರದ ಆಯವ್ಯಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪುರಸಭೆ ಸದಸ್ಯರ ಗೈರು ಹಾಜರಾತಿ ನಡುವೆ ಪ್ರಭಾರ ಅಧ್ಯಕ್ಷೆ ಉಷಾ ಸತೀಶ್ ಅವರು 98.20 ಲಕ್ಷ ರೂಪಾಯಿ ಉಳಿತಾಯ, 25.22 ಕೋಟಿ ರೂ. ಗಾತ್ರದ ಬಜೆಟ್ ಮಂಡನೆಯಾಗಿದೆ. ಪುರಸಭೆಗೆ 23 ಚುನಾಯಿತ ಹಾಗು ಐವರು ನಾಮನಿರ್ದೇಶಿತರು ಸೇರಿ 28 ಸದಸ್ಯರಿದ್ದಾರೆ. ಆದರೆ ಬಜೆಟ್ ಸಭೆಗೆ ಕೇವಲ 8 ಜನರು ಮಾತ್ರ ಹಾಜರಾದರು. ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ನಡೆಸಲಾಗುವ ಬಜೆಟ್ ಸಭೆಗೂ ಸದಸ್ಯರು ಗೈರಾಗಿರುವುದು ಅಭಿವೃದ್ಧಿಗಿಂತ ರಾಜಕೀಯ ಮುಖ್ಯ ಎನ್ನುವಂತಾಗಿದೆ.

ಪ್ರಭಾರ ಅಧ್ಯಕ್ಷೆ ಉಷಾ ಸತೀಶ್ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿ ಗುರಿಯಾಗಿಸಿಕೊಂಡು ಬಜೆಟ್ ರೂಪಿಸಲಾಗಿದೆ. ಪಟ್ಟಣದ ಐತಿಹಾಸಿಕ ಚನ್ನಕೇಶವ ಸ್ವಾಮಿ ದೇವಾಲಯ ವೀಕ್ಷಣೆಗೆ ನಿತ್ಯ ಪ್ರವಾಸಿಗರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಮೂಲಭೂತ ಸೌಕರ್ಯ ಕಲ್ಪಿಸಲು ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಕುಡಿಯುವ ನೀರಿನ ಸಮರ್ಪಕ ಪೂರೈಕೆ, ಬೀದಿ ದೀಪಗಳ ಸುಧಾರಣೆ, ನೈರ್ಮಲ್ಯ ನಿರ್ವಹಣೆ, ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ, ಉದ್ಯಾನವನ ನಿರ್ಮಾಣ ಮತ್ತು ಸುಧಾರಣೆ ಸೇರಿ ಹಲವು ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ. ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳಡಿ ಹೆಚ್ಚಿನ ಅನುದಾನ ಪಡೆಯುವ ನಿರೀಕ್ಷೆಯಿದ್ದು, ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತದೆಂದರು.



## ಅಧಿಕಾರಿಗಳ ವಿರುದ್ಧ ಸದಸ್ಯರ ಆಕ್ರೋಶ

ಸದಸ್ಯ ಬಿ. ಗಿರೀಶ್ ಮಾತನಾಡಿ, ಪುರಸಭೆಯಲ್ಲಿ ಅಧಿಕಾರಿಗಳ ಆಟಾಟೋಪ ಮಿತಿ ಮೀರಿದೆ. ಸ್ಥಳೀಯರ ಸಮಸ್ಯೆಗೆ ಸ್ಪಂದಿಸುವ ಮನೋಭಾವ ಅಧಿಕಾರಿಗಳಿಗೆ ಇಲ್ಲ. ಮಧ್ಯಾಹ್ನ 12 ಗಂಟೆಯಾದರೂ ಕಚೇರಿಗೆ ಬರುವುದಿಲ್ಲ. ರಸೀದಿ ಸಂಗ್ರಹ, ದಾಖಲೆ ನಿರ್ವಹಣೆ ಸೇರಿ ಮೂಲಭೂತ ಕಾರ್ಯಗಳಲ್ಲಿಯೂ ಸಿಬ್ಬಂದಿ ನಿರ್ಲಕ್ಷ್ಯ ಹೆಚ್ಚಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ಯಾರದೋ ಆಸ್ತಿ ಇನ್ನಾರಿಗೋ ಖಾತೆ ಮಾಡಿಕೊಡಲಾಗುತ್ತದೆ. ಬಿಲ್ ಕಲೆಕ್ಟರ್‌ಗಳು ದೊಡ್ಡ ಮಟ್ಟದ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಈ ಸಂಬಂಧ ಲೋಕಾಯುಕ್ತಕ್ಕೆ ದೂರು ನೀಡುತ್ತೇನೆ. ವ್ಯವಸ್ಥೆಯನ್ನ ಸರಿಪಡಿಸಲು ಸಾಧ್ಯವಾಗದ ನಾವು ಯಾವ ಪುರುಷಾರ್ಥಕ್ಕೆ ಸದಸ್ಯರಾಗಿರಬೇಕೆಂದು ವಾಗ್ದಾಳಿ ನಡೆಸಿದರು.

### 16.57 ಕೋಟಿ ರೂ. ಆದಾಯ ನಿರೀಕ್ಷೆ

2026–27ನೇ ಸಾಲಿನಲ್ಲಿ ಒಟ್ಟು 16.57 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದ್ದು, 25.22 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ. ಪ್ರಾರಂಭಿಕ ಶುಲ್ಕ ಒಟ್ಟುಗೂಡಿಸಿ 98.20 ಲಕ್ಷ ರೂ. ಉಳಿತಾಯ ನಿರೀಕ್ಷಿಸಲಾಗಿದೆ. ಆದಾಯದ ಪ್ರಮುಖ ಮೂಲಗಳಲ್ಲಿ ಆಸ್ತಿ ತೆರಿಗೆ, ವಾಣಿಜ್ಯ ಮಳಿಗೆ ಬಾಡಿಗೆ, ನೀರು ಸರಬರಾಜು ಶುಲ್ಕ, ಮಾರುಕಟ್ಟೆ ಶುಲ್ಕ, ಪರವಾನಗಿ ಶುಲ್ಕ ಹಾಗೂ ವಿವಿಧ ಸೇವಾ ಶುಲ್ಕಗಳು ಸೇರಿವೆ. ಸರ್ಕಾರದ ಅನುದಾನಗಳು ಕೂಡ ಪ್ರಮುಖ ಆದಾಯದ ಮೂಲವಾಗಿವೆ ಎಂದರು.

ವೆಚ್ಚದ ಭಾಗದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಅನುದಾನ ಮೀಸಲಿಡಲಾಗಿದೆ. ಜೊತೆಗೆ ಕುಡಿಯುವ ನೀರಿನ ಯೋಜನೆ, ಪೈಪ್ ಲೈನ್, ಟ್ಯಾಂಕ್‌ಗಳ ನಿರ್ಮಾಣ, ನೈರ್ಮಲ್ಯ ಹಾಗು ಘನ ತ್ಯಾಜ್ಯ ನಿರ್ವಹಣೆ, ಬೀದಿ ದೀಪಗಳ ವ್ಯವಸ್ಥೆ, ಸಾರ್ವಜನಿಕ ಶೌಚಾಲಯ, ಮಾರುಕಟ್ಟೆ ಹಾಗು ಉದ್ಯಾನ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಸದಸ್ಯ ಜಿ.ಶಾಂತಕುಮಾರ್ ಮಾತನಾಡಿ, ಕಳಪೆ ಕಾಮಗಾರಿ ಸಂಬಂಧ ಪ್ರತಿ ಸಭೆಯಲ್ಲೂ ಚರ್ಚೆಯಾಗುತ್ತದೆ. ಆದರೆ ಯಾರಿಗೂ ಶಿಕ್ಷೆ ಆಗುವುದಿಲ್ಲ. ಹೊಣೆಗಾರಿಕೆ ನಿಗದಿ ಮಾಡದೇ ಇದ್ದರೆ ಇಂತಹ ಚರ್ಚೆಗಳಿಗೆ ಅರ್ಥವೇ ಇಲ್ಲ ಎಂದು ಹೇಳಿದರು.

ಸಭೆಯ ಗಂಭೀರತೆಯನ್ನೂ ಪ್ರಶ್ನಿಸಿದ ಅವರು, ಬಜೆಟ್ ಮಂಡನೆಗೆ ಸಮಯ ನಿಗದಿ ಮಾಡಿದರೂ ಸದಸ್ಯರು ಹಾಜರಾಗುವುದಿಲ್ಲ. ಕೋರಂ ಆಗುವವರೆಗೆ ಕಾಯಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿ ಸಭೆಯಲ್ಲೂ ನಾವು ಮಾತನಾಡುತ್ತೇವೆ. ಆದರೆ ಶೇ. 20 ರಷ್ಟು ಸಲಹೆ ಸೂಚನೆಗಳು ಕಾರ್ಯರೂಪಕ್ಕೆ ಬರುವುದಿಲ್ಲ. ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದರೂ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಇಂತಹ ಮಹತ್ವದ ಸಭೆಗೆ ಸದಸ್ಯರು ಗೈರು ಹಾಜರಾಗಿರುವುದು ವಿಷಾದನೀಯ. ಈ ರೀತಿಯಾದರೆ ಸದಸ್ಯರಿಗೆ ಜನರು ಯಾವ ರೀತಿ ಬೆಲೆ ಕೊಡುತ್ತಾರೆ. ಯಾವ ನೈತಿಕತೆಯಿಂದ ಜನರ ಬಳಿ ಮತ ಕೇಳುವುದು ಎಂದು ಪ್ರಶ್ನಿಸಿದರು.

# ನವಕೀಸ್ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪುರುಷರು ಮತ್ತು ಮಹಿಳೆಯರು ಹಕ್ಕು, ಅವಕಾಶ, ಸಂಪನ್ಮೂಲ ಹಾಗೂ ಜವಾಬ್ದಾರಿಗಳನ್ನು ಹಂಚಿಕೊಂಡರೆ ಮಾತ್ರ ಸಮಾಜದ ಪ್ರಗತಿ ಸಾಧ್ಯ ಎಂದು ಅನನ್ಯ ಟ್ರಸ್ಟ್ ಅಧ್ಯಕ್ಷೆ ಕೆ.ಟಿ.ಜಯಶ್ರೀ ಹೇಳಿದರು.

ಎಂ.ಎಸ್.ರಾಮಯ್ಯ ಅಂಗ ಸಂಸ್ಥೆಯಾದ ನವಕೀಸ್ ತಾಂತ್ರಿಕ ವಿದ್ಯಾಲಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಲಿಂಗದ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಮಹಿಳೆಯರಿಗೆ ಸಮಾನ ಪಾತ್ರ ಮತ್ತು ಸ್ವಾತಂತ್ರ್ಯ ನೀಡುವುದು ಅತ್ಯಂತ ಮುಖ್ಯವಾಗಿದೆ ಎಂದರು.

ಸಮಾಜದಲ್ಲಿ ಮಾತೃ ಪ್ರಧಾನ ಆಲೋಚನೆಗಳು ಇದ್ದರೂ ಇಂದಿಗೂ ಲಿಂಗ ತಾರತಮ್ಯ ಮುಂದುವರಿದಿದೆ. ಆದ್ದರಿಂದ ಈ ಅಸಮಾನತೆಯನ್ನು ತೊಡೆದು ಹಾಕಿ ಸ್ತ್ರೀಯರನ್ನು ಗೌರವಿಸುವುದು ಹಾಗೂ ಅವರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದರು.

ಕಾಲೇಜಿನ ಉಸ್ತುವಾರಿ ಪ್ರಾಂಶುಪಾಲ ಡಾ. ಮಂಜುನಾಥ್ ಮಾತನಾಡಿ, ಮಹಿಳೆಯರು ಪುರುಷರ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸದಾ ಬೆಂಬಲವಾಗಿ ನಿಂತು, ಪೋಷಿಸುತ್ತಾ ಹಾಗೂ ಮಾರ್ಗದರ್ಶನ ಮಾಡುತ್ತಾ ಮಹತ್ವದ ಪಾತ್ರವಹಿಸುತ್ತಿದ್ದಾರೆ ಎಂದರು.

ಕಾಲೇಜಿನ ಡೀನ್ ಡಾ. ಶ್ರೀಪಾದ ಮಾರ್ಕಂಡೆಯ ಮಾತನಾಡಿ, ಮಹಿಳೆಯರು ಸಂಸಾರದ ಕಣ್ಣುಗಳಾಗಿ ತಮ್ಮ ನೋವು–ನಲಿವುಗಳೊಂದಿಗೆ ಜೀವನವನ್ನು ಕಟ್ಟಿಕೊಂಡು, ನಮ್ಮೆಲ್ಲರನ್ನು ನಡಿಸಿಕೊಂಡು ಬರುತ್ತಿರುವುದು ನಮಗೆ ಸಂತಸದ ಸಂಗತಿ ಎಂದು ಹೇಳಿದರು.

ನವಕಿಸ್ ಕಾಲೇಜಿನ ಮಹಿಳಾ ಘಟಕದ ಸಂಯೋಜಕಿ ಡಾ.ಎಂ. ಆರ್.ವಿನುತಾ ಮಾತನಾಡಿ, ನಮ್ಮ ಸಂಸ್ಥೆಯ ಆಡಳಿತ ಮಂಡಳಿ, ಅಧ್ಯಕ್ಷರು, ಉಪಾಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಲ್ಲಾ ವಿಭಾಗದ ಹೆಚ್‌ಒಡಿಗಳು ಎಲ್ಲಾ ಪುರುಷರಿಗೆ ಮತ್ತು ಕಾಲೇಜಿನಲ್ಲಿ ಹೆಣ್ಣು ಮಕ್ಕಳಿಗೆ ಸುರಕ್ಷಿತ, ಭದ್ರತೆ ಮತ್ತು ಅನುಕೂಲಕರ ವಾತಾವರಣವನ್ನು ಒದಗಿಸಲಾಗಿದೆ ಎಂದರು.

# ವೈದ್ಯಕೀಯ ಬಿಲ್ ಪಾವತಿಗೆ ಶಿಕ್ಷಕರ ಮನವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಕಲಗೂಡು: ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ವೈದ್ಯಕೀಯ ವೆಚ್ಚದ ಬಿಲ್‌ಗಳಿಗೆ ಮೇಲು ಸಹಿ ಮಾಡಿ ವೈದ್ಯಕೀಯ ವೆಚ್ಚ ಮಂಜೂರು ಮಾಡಿಕೊಡುವಂತೆ ಶಿಕ್ಷಕರ ಸಂಘ ಹಾಗೂ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಮಾತನಾಡಿ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವೈದ್ಯಕೀಯ ವೆಚ್ಚದ ಬಿಲ್‌ಗಳಿಗೆ 2022–23ನೇ ಸಾಲಿನಿಂದ ಈ ವರೆಗೆ ಹಣ ಬಿಡುಗಡೆಯಾಗಿಲ್ಲ. ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಶಿಕ್ಷಕರು ಲಕ್ಷಾಂತರ ರೂ. ಸಾಲ ಮಾಡಿ ಚಿಕಿತ್ಸೆ ಪಡೆದಿದ್ದು ಸಾಲ ತೀರಿಸಲಾಗದೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಪ್ರಸ್ತುತ ಸಾಲಿನಲ್ಲಿ 1.98 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು ಮೇಲು ಸಹಿ ಮಾಡಿ ಬಿಲ್‌ಗಳನ್ನು ಪಾಸ್ ಮಾಡಿ ಶಿಕ್ಷಕರ ಸಂಕಷ್ಟಕ್ಕೆ ಸ್ಪಂದಿಸುವಂತೆ ಕೋರಿ ತಾಪಂ ಇಒ ಅವರಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದರು. ಸಮಸ್ಯೆ ಕುರಿತು ಇಒ ಶ್ರೀನಿವಾಸ್ ಮಾತನಾಡಿ, ವೈದ್ಯಕೀಯ ವೆಚ್ಚದ ಬಿಲ್ ಬಂದಿದ್ದು ಅವುಗಳ ಪರಿಶೀಲನೆ ನಡೆಸಿದಾಗ ಕ್ರಮಬದ್ಧವಾಗಿಲ್ಲ. ಸಹಿಗಳಲ್ಲಿ ವ್ಯತ್ಯಾಸವಿದೆ. ಕೆಲವು ಬಿಲ್‌ಗಳಲ್ಲಿ ಬಿಇಒ ಸಹಿ ಇಲ್ಲ ಹೀಗೆ ದೋಷಪೂರಿತವಾಗಿದ್ದು ನಿಯಮಾನುಸಾರ ಕ್ರಮಬದ್ಧವಾಗಿ ಬಿಲ್ ಗಳನ್ನು ಸಲ್ಲಿಸಿದರೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜ್, ಶಿಕ್ಷಕರ ಸಂಘದ ರಾಜ್ಯ ಪರಿಷತ್ ಸದಸ್ಯ ಕೆ.ಟಿ. ಮೋಹನ್ ಕುಮಾರ್, ಶಿಕ್ಷಕರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಜೈನ ಸಾಹಿತ್ಯದಲ್ಲಿ ಮಹಿಳೆಯರಿಗೆ ಅಪಾರ ಗೌರವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ಜೈನ ಸಾಹಿತ್ಯದಲ್ಲಿ ಸ್ತ್ರೀಯರಿಗೆ ಅತ್ಯಂತ ಗೌರವನೀಯ ಸ್ಥಾನಮಾನ ನೀಡಿರುವುದನ್ನು ಆದಿ ಕವಿಗಳ ಕೃತಿಗಳಲ್ಲಿ ಕಾಣಬಹುದಾಗಿದೆ ಎಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಗೌರವ ಕಾರ್ಯದರ್ಶಿ ಹಾಗು ಪ್ರಾಧ್ಯಾಪಕಿ ಡಾ. ಪದ್ಮಿನಿ ನಾಗರಾಜು ಹೇಳಿದರು.

ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಲ್ಲಿ ಗುರುವಾರ ಏರ್ಪಡಿಸಿದ್ದ ಮಾಸಿಕ ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಙಕನ್ನಡ ಜೈನ ಸಾಹಿತ್ಯದಲ್ಲಿ ಸ್ತ್ರೀಯರ ಚಿತ್ರಣಟ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕನ್ನಡ ಸಾಹಿತ್ಯದಲ್ಲಿ ಪಂಪ, ರನ್ನ ಮತ್ತು ಜನ್ನ ಮಹತ್ವದ ಸ್ಥಾನ ಪಡೆದ ಕವಿಗಳಾಗಿದ್ದಾರೆ. ಪಂಪ ಮತ್ತು ರನ್ನ ಲೌಕಿಕ ಮತ್ತು ಧಾರ್ಮಿಕ ಹಿನ್ನೆಲೆಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದರು. ಜನ್ನನು ತನ್ನ ಎರಡೂ ಕೃತಿಗಳನ್ನು ಧಾರ್ಮಿಕ ವಿಷಯಕ್ಕೆ ಮೀಸಲಿಟ್ಟಿದ್ದಾರೆ. ಅವರ ಕೃತಿಗಳು ಆಯಾ ಕಾಲದ ಸ್ತ್ರೀಯರ ಬದುಕಿನ ವಿವರ ತಿಳಿಸುವಂತದ್ದಾಗಿದೆ. ಮಹಿಳಾ ಶೋಷಣೆ ಮತ್ತು ಮಹಿಳಾ ಪ್ರತಿರೋಧ ಸಾರ್ವಕಾಲಿಕವಾದ್ದದ್ದು ಎಂಬುದನ್ನು ನಾವು ಒಪ್ಪಲೇಬೇಕು ಎಂದು ಹೇಳಿದರು.



ವರ್ತಮಾನದಲ್ಲಿ ನಡೆಯುತ್ತಿರುವ ಸ್ತ್ರೀ ಶೋಷಣೆ, ನಗರೀಕರಣದ ಪ್ರಭಾವ, ಡಿಜಿಟಲ್ ಜಗತ್ತಿನ ಮಹಿಳಾ ಶೋಷಣೆಯ ಕರಾಳ ಮುಖಗಳನ್ನು ಅವರು ಪರಿಚಯಿಸಿದರು.

ಶತ ಶತಮಾನಗಳಿಂದಲೂ ಜೈನ ಧರ್ಮೀಯರ ಪಂಚ ಕಲ್ಯಾಣ ಮತ್ತು ಇತರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಜೈನ ಮಹಿಳೆಯರು ನಿರ್ವಹಿಸುತ್ತಿರುವ ಕಾರ್ಯಗಳನ್ನು ಶ್ಲಾಘಿಸಿದರು. ಆಧುನಿಕ ಸಮಾಜದಲ್ಲಿ ಉಂಟಾಗುತ್ತಿರುವ ಕೌಟುಂಬಿಕ ಅಸ್ಥಿರತೆ, ಯುವ ಪೀಳಿಗೆಯಲ್ಲಿ ಕೌಟುಂಬಿಕ ವಿಷಯದಲ್ಲಿ ಆಗುತ್ತಿರುವ ಋಣಾತ್ಮಕ ಬದಲಾವಣೆ ಸ್ವಸ್ಥ ಸಮಾಜಕ್ಕೆ ಪೂರಕವಾಗಿಲ್ಲ ಎಂದು ಕೆಲವು ದೃಷ್ಟಾಂತಗಳ ಮೂಲಕ ವಿವರಿಸಿದರು. ಮಾಸಿಕ ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕ ಡಾ.ರಮೇಶ್ ಶಿರಹಟ್ಟಿ ಶಾಸ್ತ್ರಿ ಮಾತನಾಡಿ, ಕನ್ನಡ ಸಾಹಿತ್ಯದ ಆರಂಭಿಕ ಘಟ್ಟವು ಜೈನ ಸಾಹಿತ್ಯವೇ ಆಗಿದೆ. ಪ್ರಾಚೀನ ಜೈನ ಕವಿಗಳು ಜೈನ ಧರ್ಮದ ಜೊತೆಗೆ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ತಮ್ಮ ಕೃತಿಗಳ ಮೂಲಕ ಪ್ರತಿಪಾದಿಸಿದ್ದಾರೆ. ಪ್ರಾಕೃತ ಸಾಹಿತ್ಯವು ಕನ್ನಡ ಸಾಹಿತ್ಯದ ಮೇಲೆ ಅಪಾರ ಪ್ರಭಾವ ಬೀರಿವೆ ಎಂದು ಹೇಳಿದರು. ಪ್ರಾಚೀನ ಜೈನ ಕವಿಗಳ ಸೃಜನಾತ್ಮಕ ಚಿಂತನೆಗಳು ಸಾರ್ವಕಾಲಿಕ, ಮೌಲಿಕ ಮತ್ತು ಮಾನವೀಯ ನೆಲೆಗಟ್ಟಿನಲ್ಲಿ ಜೀವಪರವಾಗಿದ್ದವು. ಕವಿ ಜಯವಲ್ಲಭನ ವಜ್ಜಾಲಗ್ಗದ ಪ್ರಾಕೃತ ಗಾಹೆಗಳನ್ನು ವಾಚಿಸಿ ಗೃಹಿಣಿ ಮತ್ತು ಗೃಹಲಕ್ಷ್ಮಿಯರ ವಾಸ್ತವ ಸ್ವರೂಪ ಹಾಗೂ ಮಹತ್ವ ವಿವರಿಸಿದರು.

ಹಜಾರಿ ಪಾರ್ಶ್ವನಾಥ ಶಾಸ್ತ್ರಿ ಮಂಗಲಾರ್ಚನೆ ಮಾಡಿದರು. ವಿಶ್ವನಾಥ್ ಸ್ವಾಗತಿಸಿದರು. ಡಾ. ರಾಜೇಂದ್ರ ಪಾಟೀಲ್ ಶಾಸ್ತ್ರಿ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಶ್ರವಣಬೆಳಗೊಳ ಕುಷ್ಮಾಂಡಿನಿ ಮಹಿಳಾ ಸಮಾಜದ ಉಪಾಧ್ಯಕ್ಷೆ ತಿಲಕ ನವೀನ್‌ಕುಮಾರ್, ದಿಗಂಬರ ಜೈನ ಸಮಾಜದ ಅಧ್ಯಕ್ಷ ಜಿ.ಪಿ.ಪದ್ಮಕುಮಾರ್, ದೀಪಾಂಜನ್ ಮೋದಕ್, ಬಾಹುಬಲಿ ಬ್ರಹ್ಮಚರ್ಯಾಶ್ರಮದ ವಿದ್ಯಾರ್ಥಿಗಳು, ಬೋಧಕ ಮತ್ತು ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

# ಸಕಲೇಶಪುರದಲ್ಲಿ ಅರ್ಥಪೂರ್ಣ ರಾಮೋತ್ಸವ



ಸಕಲೇಶಪುರ: ಶ್ರೀ ರಾಮ ನವಮಿ ನಿಮಿತ್ತ ಪಟ್ಟಣದ ಕುಶಾಲನಗರ ಬಡಾವಣೆಯಲ್ಲಿ ಹಿಂದು ಹಿತರಕ್ಷಣಾ ವೇದಿಕೆಯ ವತಿಯಿಂದ ಹಮ್ಮಿಕೊಂಡಿದ್ದ ರಾಮೋತ್ಸವ ಅತ್ಯಂತ ಯಶಸ್ವಿಯಾಗಿ ಜರುಗಿತು.

ಬೆಳಿಗ್ಗೆ 10 ಗಂಟೆಗೆ ಶ್ರೀ ರಾಮತಾರಕ ಮಂತ್ರ ಘೋಷಗಳೊಂದಿಗೆ ಧಾರ್ಮಿಕ ವಿಧಿ ವಿಧಾನಗಳು ಆರಂಭಗೊಂಡವು. ಭಕ್ತಿಭಾವದಿಂದ ನಡೆದ ವಿಶೇಷ ಪೂಜಾ ಕಾರ್ಯಕ್ರಮಗಳು ಮಧ್ಯಾಹ್ನ 11.30ಕ್ಕೆ ಸಂಪನ್ನಗೊಂಡವು. ನಂತರ ಆಗಮಿಸಿದ ಭಕ್ತಾದಿಗಳಿಗೆ ಪಾನಕ, ಕೋಸಂಬರಿ ಹಾಗೂ ಲಘು ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಕಾರ್ಯಕ್ರಮವು ಸಮಾಪ್ತಿಗೊಂಡಿತು.

# ವಿದ್ಯುತ್ ಕಣ್ಣಾಮುಚ್ಚಾಲೆ: ಹಿರೀಸಾವೆ ಸೆಸ್ಕ್ ಕಚೇರಿಗೆ ರೈತರ ಮುತ್ತಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಗ್ರಾಮೀಣ ಭಾಗದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಂತೆ ಆಗ್ರಹಿಸಿ ತಾಲ್ಲೂಕಿನ ಚನ್ನೇನಹಳ್ಳಿ, ಪೂಮಡಿಹಳ್ಳಿ ಸೇರಿ 20ಕ್ಕೂ ಹೆಚ್ಚು ಗ್ರಾಮಗಳ ರೈತರು ಹಿರೀಸಾವೆ ಸೆಸ್ಕಾಂ ಶಾಖಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ವಿಷಯ ತಿಳಿದು ದೌಡಾಯಿಸಿದ ಎಇಇ ವಜ್ರ ಕುಮಾರ್ ಅವರನ್ನು ಕಚೇರಿ ಮುಂದೆ ತಡೆದ ರೈತರು ತೀವ್ರ ತರಾಟೆಗೆ ತೆಗೆದುಕೊಂಡರು. ಈ ವೇಳೆ ರೈತರು ಹಾಗು ಅಧಿಕಾರಿ ನಡುವೆ ಮಾತಿನ ಚಕಮನಕಿ ನಡೆಯಿತು.

ಸರ್ಕಾರದ ಆದೇಶದಂತೆ ರೈತರ ಪಂಪ್ ಸೆಟ್‌ಗಳಿಗೆ ತ್ರಿ ಫೇಸ್ ವಿದ್ಯುತ್ ಅನ್ನು ನಿತ್ಯ 7 ಗಂಟೆ ಪೂರೈಸಬೇಕು. ಆದರೆ ಈಗ ರಾತ್ರಿ ವೇಳೆ ಕೇವಲ 2 ಹಾಗು ಹಗಲು 1 ಗಂಟೆ ಮಾತ್ರ ನೀಡಲಾಗುತ್ತಿದೆ. ಅದರಲ್ಲಿಯೂ ಲೋಡ್ ಶೆಡ್ಡಿಂಗ್ ಹಾಗು ಎಲ್‌ಸಿ ನೆಪದಲ್ಲಿ ವಿದ್ಯುತ್ ಕಡಿತ ಮಾಡಲಾಗತ್ತಿದೆ ಎಂದು ಆರೋಪಿಸಿದರು.



ಬೇಸಿಗೆಯಲ್ಲಿ ವಿದ್ಯುತ್ ಸಮಸ್ಯೆ ಬಿಗಡಾಯಿಸುತ್ತದೆಂಬ ಅರಿವಿದ್ದರೂ ಸೆಸ್ಕಾಂ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದಿಲ್ಲ. ವಿದ್ಯುತ್ ಸಮಸ್ಯೆಯು ಭೂತವಾಗಿ ಕಾಡುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಬೆಳೆಗಳು ಒಣಗುವುದು ಮಾತ್ರವಲ್ಲದೆ ಹೈನುಗಾರಿಕೆ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೈನುಗಾರಿಕೆಯಿಂದ ಬದುಕು ಕಟ್ಟಿಕೊಂಡಿರುವ ರೈತರು, ಮೇವು ಬೆಳೆಯಲು ಹಾಗು ಹಾಲು ಉತ್ಪಾದನೆಗೆ ವಿದ್ಯುತ್ ಅಗತ್ಯವಾಗಿದೆ. ಹೀಗಾಗಿ ಕುಟುಂಬ ನಿರ್ವಹಣೆಗೆ ಸಂಕಷ್ಟ ಎದುರಾಗಿದೆ ಎಂದು ಪ್ರತಿಭಟನಾಕಾರರು ಅಳಲು ತೋಡಿಕೊಂಡರು.

ಚನ್ನೇನಹಳ್ಳಿ ಗ್ರಾಮದ ರೈತ ದಿಲೀಪ್ ಮಾತನಾಡಿ, ವಿದ್ಯುತ್ ಪರಿವರ್ತಕ ಕೆಟ್ಟರೆ ರಿಪೇರಿಗೆ 1 ತಿಂಗಳು ಕಚೇರಿಗೆ ಅಲೆದರೂ ಬದಲಾಯಿಸುವುದಿಲ್ಲ. 15 ರಿಂದ 20 ಸಾವಿರ ರೂ. ಹಣ ಕೇಳುತ್ತಾರೆ. ರೈತರ ಜಮೀನಿನಲ್ಲಿ ವಿದ್ಯುತ್ ಪರಿವರ್ತಕ ಸುಟ್ಟು ಹೋದರೆ 48 ಗಂಟೆಗಳ ಒಳಗಾಗಿಯೇ ಇಲಾಖೆಯು ಬದಲಾಯಿಸಬೇಕು ಎಂಬುದು ಸರ್ಕಾರದ ನಿಯಮ. ಇಲ್ಲಿ ತಿಂಗಳು ಸಮೀಪಿಸಿದರೂ ಅಧಿಕಾರಿಗಳು ಗಮನ ಹರಿಸುವುದಿಲ್ಲ. ಅದರಿಂದ ಕಬ್ಬು ಸೇರಿ ವಿವಿಧ ಬೆಳೆಗಳು ನೀರಿಲ್ಲದೆ ಒಣಗುತ್ತಿವೆ ಎಂದು ಹೇಳಿದರು.

ಬೊಮ್ಮೇನಹಳ್ಳಿ ಗ್ರಾಮದ ಶಿವರಾಮೇಗೌಡ ಮಾತನಾಡಿ, ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆಯಾದಲ್ಲಿ ಅಥವಾ ಇತರೆ ಸಮಸ್ಯೆ ಕಂಡುಬಂದಾಗ ಕರೆ ಮಾಡಿದರೆ ಅಧಿಕಾರಿಗಳು ಸ್ವೀಕರಿಸುವುದಿಲ್ಲ. ಲೈನ್ ಮ್ಯಾನ್ ಗಳನ್ನು ಕೇಳಿದರೆ ಎಲ್‌ಸಿ ತೆಗೆದುಕೊಂಡಿದ್ದೇವೆಂದು ಸಮಜಾಯಿಸಿ ನೀಡುತ್ತಾರೆ. ಆದರೆ ಲೈನ್‌ಮ್ಯಾನ್‌ಗಳು ಯಾವುದೋ ಅಂಗಡಿ ಮುಂದೆ ಕುಳಿತಿರುತ್ತಾರೆ. ಇದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಎಇಇ ವಜ್ರಕುಮಾರ್ ಅವರು ಮಾತನಾಡಿ, ಈ ಸಮಸ್ಯೆಯನ್ನು ಬಗೆಹರಿಸಲು ಹೊಸ ವಿಧಾನದಲ್ಲಿ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ಐದಾರು ದಿನಗಳಲ್ಲಿ ಸಮಸ್ಯೆ ಬಗೆಹರಿಸಲಾಗುವುದೆಂದು ಭರವಸೆ ನೀಡಿದರು.

ಶಾಖಾಧಿಕಾರಿ ವೆಂಕಟೇಶ್, ಕಸರನಹಳ್ಳಿ ಗ್ರಾಮದ ಪಟೇಲ್ ಕೃಷ್ಣ, ಮಂಜುನಾಥ್, ಗೋಪಾಲ್, ಮಹೇಶ್, ಬೊಮ್ಮೇನಹಳ್ಳಿ ರಾಜು, ರವಿ ಗೌಡ, ಶಿವರಾಮೇಗೌಡ, ನಂಜೇಗೌಡ, ಬಸವೇಗೌಡ, ಕುಮಾರ್, ರುದ್ರೇಗೌಡ, ಶಿವರುದ್ರೇಗೌಡ, ಗಂಗಾಧರ್, ಬಸವರಾಜ್, ವಾಸು, ಮಂಜೇಗೌಡ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್–28

1930: ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಭಾಗವಾಗಿ ದಂಡಿ ಯಾತ್ರೆ ಮುಂದುವರಿದ ಮಹತ್ವದ ದಿನಗಳಲ್ಲಿ ಒಂದಾಗಿದೆ.

1979: ಅಮೇರಿಕದ ಥ್ರೀ ಮೈಲ್ ಐಲ್ಯಾಂಡ್ ಅಣು ವಿದ್ಯುತ್ ಸ್ಥಾವರದಲ್ಲಿ ಗಂಭೀರ ಅಣು ದುರಂತ ಸಂಭವಿಸಿತು.

2005: ಸುಮಾತ್ರಾ ದ್ವೀಪ ಪ್ರದೇಶದಲ್ಲಿ ಭಾರೀ ಭೂಕಂಪ ಸಂಭವಿಸಿ ಸಾವಿರಾರು ಮಂದಿ ಮೃತಪಟ್ಟರು.

2010: ಹಮೀದ್ ಕರಜಾಯಿ ಮತ್ತೆ ಅಫ್ಘಾನಿಸ್ತಾನದ ರಾಷ್ಟ್ರಪತಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

**ಜನನ**

1921: ಡರ್ಕ್ ಬೋಗಾರ್ಡ್, ಪ್ರಸಿದ್ಧ ಬ್ರಿಟಿಷ್ ನಟ

1936: ಮಾರಿಯೋ ವರ್ಗಾಸ್ ಲ್ಲೋಸಾ, ನೋಬೆಲ್ ಪ್ರಶಸ್ತಿ ಪುರಸ್ಕೃತ ಖ್ಯಾತ ಲೇಖಕ

**ಮರಣ**

1969: ಡ್ವೈಟ್ ಡಿ. ಐಸನ್‌ಹೋವರ್, ಅಮೇರಿಕದ ಮಾಜಿ ರಾಷ್ಟ್ರಪತಿ

1941: ವರ್ಜಿನಿಯಾ ವುಲ್ಫ್, ಪ್ರಸಿದ್ಧ ಇಂಗ್ಲಿಷ್ ಲೇಖಕಿ

# 43 ಗ್ರಾಂ ತೂಕದ ಮಾಂಗಲ್ಯ ಸರ ದೋಚಿ ಪರಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಚಲಿಸುತ್ತಿದ್ದ ಬೈಕ್‌ನಿಂದಲೇ ಮಹಿಳೆ ಕೊರಳಿಗೆ ಕೈ ಹಾಕಿದ ಅಪರಿಚಿತರು 43 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ದೋಚಿ ಪರಾರಿಯಾಗಿರುವ ಘಟನೆ ತಾಲ್ಲೂಕಿನ ಹೆಬ್ಬಾಳು ಪಶುವೈದ್ಯಕೀಯ ಆಸ್ಪತ್ರೆ ಸಮೀಪ ನಡೆದಿದೆ.

ಹಳೇಬೀಡು ಹೋಬಳಿ ಸಿದ್ದಾಪುರ ಗ್ರಾಮದ ಕೃಷ್ಣವೇಣಿ ಎಂಬುವವರ ಅಂದಾಜು 6.45 ಲಕ್ಷ ರೂ. ಮೌಲ್ಯದ ಸರ ಕಳವು ಮಾಡಲಾಗಿದೆ. ಕಾರ್ಯನಿಮಿತ್ತ ತಮ್ಮ ಗಂಡನ ಜೊತೆಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಬೈಕ್‌ನಲ್ಲಿ ಹಿಂದಿನಿಂದ ಬಂದ ಮುಸುಕುಧಾರಿಗಳಿಬ್ಬರು ಹತ್ತಿರಕ್ಕೆ ಬಂದು ಹಿಂದೆ ಕುಳಿತಿದ್ದ ವ್ಯಕ್ತಿ ಕೊರಳಿಗೆ ಕೈ ಹಾಕಿದ್ದಾನೆ. ಕೃಷ್ಣವೇಣಿ ಅವರು ಹಿಂತಿರುಗಿ ನೋಡುವಷ್ಟರಲ್ಲಿ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಗ್ಯಾರಂಟಿ ಸಮಿತಿಯಿಂದ ಗ್ರಾಮ ಪಂಚಾಯಿತಿವಾರು ಪರಿಶೀಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಕುರಿತ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪರಿಶೀಲನೆ ನಡೆಸಲಾಘುವುದು ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಲ್.ಪಿ.ಪ್ರಕಾಶ್‌ಗೌಡ ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯ ಲಾಭವನ್ನು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಪ್ರಯೋಜನ ಪಡೆಯುತ್ತಿರುವ ತಾಲೂಕು ಚನ್ನರಾಯಪಟ್ಟಣ. ಅದನ್ನು ಜನರಿಗೆ ಮನವರಿಕೆ ಮಾಡಿಕೊಡುವ ಮತ್ತು ಯೋಜನೆಯಿಂದ ವಂಚಿತವಾಗಿರುವವರನ್ನು ಸೇರಿಸುವ ಸಲುವಾಗಿ ಏಪ್ರಿಲ್ ಮೊದಲ ವಾರದ ನಂತರ ತಾಲೂಕಿನ 40 ಗ್ರಾಮ ಪಂಚಾಯಿತಿಗಳಲ್ಲಿಯೂ ಸಭೆ ನಡೆಸಲಾಗುವುದು.




ಅಧಿಕಾರಿಗಳ ಸಮ್ಮುಖದಲ್ಲಿ ಫಲಾನುಭವಿಗಳು, ವಂಚಿತರು ಸಭೆಯಲ್ಲಿ ಯೋಜನೆಯ ಕುರಿತಾಗಿ ಸಾಧಕ–ಬಾಧಕಗಳನ್ನು ಚರ್ಚಿಸಬಹುದೆಂದರು.

ಇದರೊಂದಿಗೆ ಅನ್ನಭಾಗ್ಯ ಯೋಜನೆಯಡಿ ಸಾಕಷ್ಟು ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಗ್ಯಾರಂಟಿ ಸಮತಿ ಸದಸ್ಯರು ತಾಲೂಕಿನ ಪ್ರತಿ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಇರುವ ಲೋಪದೋಷಗಳ ಕುರಿತಾಗಿ ಪರಿಶೀಲನೆ ನಡೆಸಲಿದ್ದೇವೆ. ತಾಲ್ಲೂಕಿನಲ್ಲಿ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ ಮತ್ತು ಯುವನಿಧಿ ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಯುವನಿಧಿಗಾಗಿ ಪದವಿಧರ ಯುವಕರನ್ನು ಆಯಾ ಪದವಿ ಕಾಲೇಜಿಗೆ ಹೋಗಿ ನೊಂದಾಯಿಸುವ ಕೆಲಸವನ್ನು ಸಮಿತಿ ಶೀಘ್ರ ಹಮ್ಮಿಕೊಳ್ಳಲಿದೆ ಎಂದರು.

ಶಕ್ತಿ ಯೋಜನೆಗಾಗಿ ಬಸ್‌ಗಳ ಕೊರತೆ ಹೆಚ್ಚಿದ್ದು, ಈ ಬಗೆ ಸ್ಥಳೀಯ ಘಟಕ ವ್ಯವಸ್ಥಾಪಕರನ್ನು ಸಂಪರ್ಕಿಸಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡುವುದು ಸೇರಿ ನಿಲ್ದಾಣದಲ್ಲಿ ಶುಚಿತ್ವ, ಕುಡಿಯುವ ನೀರಿನ ಘಟಕ ರಿಪೇರಿ ಮಾಡಿಸುವ ಕುರಿತಾಗಿ ಹಲವು ಬಾರಿ ಗಮನಕ್ಕೆ ತಂದರೂ ಅವರು ಸ್ಪಂದಿಸುತ್ತಿಲ್ಲದ ಕಾರಣ ಸಭೆಯಲ್ಲಿ ಅವರ ವಿರುದ್ಧ ನಿರ್ಣಯ ಕೈಗೊಂಡು ರಾಜ್ಯ ಸಮಿತಿಗೆ ಕಳಿಸಿಕೊಡುವ ಮೂಲಕ ಶಿಸ್ತು ಕ್ರಮಕ್ಕೆ ಆಗ್ರಹಿಸಿದ್ದೇವೆ ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248